# ಬೆಂಗಳೂರು ಉತ್ತರ ಜಿಲ್ಲಾ ಮಟ್ಟದ ಅರ್ಧವಾರ್ಷಿಕ ಪರೀಕ್ಷೆ

## ಸೆಪ್ಟೆಂಬರ್–2019

## 10ನೆಯ ತರಗತಿ

## II LANGUAGE - KANNADA

ಸಮಯ : 02–30 ಗಂಟೆಗಳು | ಗರಿಷ್ಠ ಅಂಕಗಳು : 80

---

**I** ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. **4 x 1 = 4**

1. 'ಆಶ್ರಯ' ಪದದ ತದ್ಭವ ರೂಪವಿದು.
   ಎ) ಆಸರೆ   ಬಿ) ಮುಸುರೆ
   ಸಿ) ಕಸರೆ   ಡಿ) ಅರಸ

2. 'ರೈತನಿಗೆ' ಪದದಲ್ಲಿರುವ ವಿಭಕ್ತಿ ಪ್ರತ್ಯಯದ ಹೆಸರು
   ಎ) ತೃತೀಯಾ ವಿಭಕ್ತಿ   ಬಿ) ಪಂಚಮೀ ವಿಭಕ್ತಿ
   ಸಿ) ಸಪ್ತಮೀ ವಿಭಕ್ತಿ   ಡಿ) ಚತುರ್ಥೀ ವಿಭಕ್ತಿ

3. 'ಗಿರೀಂದ್ರ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.
   ಎ) ಗುಣಸಂಧಿ   ಬಿ) ಸವರ್ಣದೀರ್ಘಸಂಧಿ
   ಸಿ) ಯಣ್‌ಸಂಧಿ   ಡಿ) ವೃದ್ಧಿಸಂಧಿ

4. 'ಉದರ' ಪದದ ಸಮಾನಾರ್ಥವಿದು.
   ಎ) ಬಟ್ಟೆ   ಬಿ) ಕಟ್ಟೆ
   ಸಿ) ಹೊಟ್ಟೆ   ಡಿ) ತಟ್ಟೆ

**II** ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. **12 x 1 = 12**

5. ಬೇಡನು ಪ್ರಾಣಿಗಳನ್ನು ಕೊಲ್ಲಲು ಮಾಡುತ್ತಿದ್ದ ಉಪಾಯವೇನು?
6. ಈ ನಾಡಿನ ಬೆನ್ನೆಲುಬು ಯಾರು?
7. ಪುಟ್ಟರಾಜರ ತಂದೆ ತಾಯಿಯರ ಹೆಸರೇನು?
8. ಹಕ್ಕಿಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ?
9. ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು?
10. ಸಸ್ತನಿಗಳ ಆಶ್ರಯದಾಣಗಳು ಯಾವುವು?
11. ತ್ರಿಶಂಕುಗಳು ಎಂದು ಯಾರನ್ನು ಕರೆಯಲಾಗಿದೆ?
12. ಸಿದ್ಧಾರ್ಥ ಯಾರ ಹಾಗೂ ಯಾವುದರ ಮೋಹವನ್ನು ತೊರೆದನು?
13. ಚೈತ್ರವು ಮಾಡುವ ಕೆಲಸವೇನು?

14. ತಿಮಿರಕ್ಕೆ ವೈರಿ ಯಾವುದು?

15. ಏಣಿ ಜನರಿಗೆ ಮಾಡಿದ ಉಪಕಾರವೇನು?

16. ನಮ್ಮ ಕರ್ತವ್ಯವನ್ನು ಹೇಗೆ ಮುಗಿಸಬೇಕೆಂದು ಸಿ.ಪಿ.ಕೆ.ಯವರು ಹೇಳಿದ್ದಾರೆ?

**III ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **8 x 2 = 16**

17. ಸಾಮಾನ್ಯವಾದ ಲೋಕ ವರ್ತನೆ ಯಾವುದು?

18. ಪೆನ್ನು ಖಡ್ಗಕ್ಕಿಂತ ಹರಿತವಾದುದು. ಏಕೆ?

19. ಪುಟ್ಟರಾಜರ ವೇಷಭೂಷಣಗಳು ಹೇಗಿದ್ದವು?

20. ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು?

21. ಏಣಿ ಹೇಳಿಕೊಳ್ಳುವ ಕಷ್ಟಗಳೇನು?

22. ಯುಗದ ಆದಿ ತಂದ ಸಂಭ್ರಮವೇನು?

23. ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಹೇಗೆ ಉಳಿಸಿದರು?

24. ವೈದ್ಯರ ಮನೆಯಿಂದ ಕಳುವಾದ ವಸ್ತುಗಳು ಮರಳಿ ಸಿಕ್ಕಿದ ಬಗೆ ಹೇಗೆ?

**IV ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.** **1 x 3 = 3**

25. ಅ. ರಾ. ಮಿತ್ರ

**V ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ.** **1 x 3 = 3**

26. ಕಾಡತುಂಬ ಪ್ರೀತಿ ಹೊಳೆಯು ಕೋಡಿಯಂತೆ ಹರಿಯಿತು
ಗೂಡಿನಲ್ಲಿ ಹಾಡು ಹುಟ್ಟಿ ಹೊಸರಾಗ ಕೇಳಿತು
ಮಕರಂದ ಸವಿಯಲೆಂದು ದುಂಬಿ ಹೂವ ಸೇರಿತು
ಗಿಡಗಿಡವೂ ಅಪ್ಪಿಕೊಂಡು ಕುಣಿಯುವಂತೆ ಕಂಡಿತು.

**VI ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿ ಬರೆಯಿರಿ.** **1 x 3 = 3**

27. "ಮಗುವಿನ ಮುಖ ಚಂದ್ರನಂತೆ ಮನೋಹರವಾಗಿದೆ."

**VII ಕೆಳಗಿನ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ.** **1 x 3 = 3**

28. ಹಕ್ಕಿಗಳಿಗೆ ಗೂಡು ಮಕ್ಕಳಿಗೆ ತಾಯಿ

ಅಥವಾ

ಮನಸ್ಸಿದ್ದರೆ ಮಾರ್ಗ

VIII ಕೆಳಗಿನವುಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ 5 x 3 = 15

29. "ಅವರು ಯಾರಿಗೂ ಮೋಸ, ವಂಚನೆ ಮಾಡುವವರಲ್ಲ"

30. "ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ"

31. "ಹುಟ್ಟಿದ ಮಕ್ಕಳಿಗೆ ಬದುಕಿನ ಪಾಠ ಹೇಳುವ ಶಾಲೆ ಅದು"

32. "ನಮ್ರತೆಗೆ ನಾ ಕರಗುತ್ತೇನೆ"

33. "ನೆಲ ಮುಗಿಲ ವಾಲಗವೆ ನಡೆದಂತಿದೆ"

IX ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1 x 4 = 4

34. ಕೊರಡ ಕೊನರಿಸಿ ..............................

..............................

..............................

.............................. ಮತ್ತೇರಿದೆ

**ಅಥವಾ**

ಯುಗದ ಹಿಂದಿನ ..............................

..............................

..............................

..............................ತುಂಬ ಸವಿ ಚೈತ್ರವು

X ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 1 x 4 = 4

35. ಸದ್ದು ಮಾಡದಿರು – ಕವಿತೆ ನೀಡುವ ಸಂದೇಶವೇನು?

**ಅಥವಾ**

ಬದುಕಿನಲ್ಲಿ ಶಾಂತಿ ಮತ್ತು ಸದ್ದು ಇವುಗಳಲ್ಲಿ ಯಾವುದು ಹೆಚ್ಚು ಸುಖ ನೀಡುತ್ತದೆ? ಏಕೆ?

XI ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1 x 4 = 4 (2 + 2)

36. ವಿಶ್ವದ ಬಹು ಭಾಷಾ ಪ್ರಪಂಚದಲ್ಲಿ ಸುಮಾರು ನಾಲ್ಕು ಸಾವಿರ ಭಾಷೆಗಳಿವೆ. ಭಾಷೆಗಳನ್ನು ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆ ಎಂದು ವಿಂಗಡಿಸಲಾಗಿದೆ. ವ್ಯಾವಹಾರಿಕ ಎಂದರೆ ಜೀವದ ಭಾಷೆ. ಅದರಲ್ಲಿ ಜನರು ಮಾತನಾಡುತ್ತಾರೆ. ವ್ಯವಹರಿಸುತ್ತಾರೆ. ಉದಾಹರಣೆಗೆ ಕನ್ನಡ, ತುಳು, ಕೊಂಕಣಿ, ತೆಲುಗು, ತಮಿಳು, ಉರ್ದು, ಇತ್ಯಾದಿ. ಎಲ್ಲಾ ಗ್ರಾಂಥಿಕ ಭಾಷೆಗಳು ವ್ಯಾವಹಾರಿಕ ಭಾಷೆಯಾಗಬೇಕಿಲ್ಲ. ಹಾಗೆಯೇ ಎಲ್ಲ ವ್ಯಾವಹಾರಿಕ ಭಾಷೆಗಳೂ ಗ್ರಾಂಥಿಕವಾಗಬೇಕಿಲ್ಲ. ತುಳು ಒಂದು ಸುಂದರ ವ್ಯಾವಹಾರಿಕ ಭಾಷೆ ಆದರೆ ಗ್ರಾಂಥಿಕ ಭಾಷೆಯಲ್ಲ. ಗ್ರೀಕ್ ಗ್ರಾಂಥಿಕ ಭಾಷೆಯಾಗಿದೆ. ಆದರೆ ಯಾವ ಪ್ರದೇಶದಲ್ಲೂ ವ್ಯಾವಹಾರಿಕವಾಗಿಲ್ಲ. ನವಶಿಲಾಯುಗದ ಮಾನವ ತನ್ನ ಸಂಚಾರಿ ಜೀವನವನ್ನು ತ್ಯಜಿಸಿ ಒಂದೆಡೆ ಬೀಡುಬಿಟ್ಟು ಆಸ್ತಿ, ಮನೆ, ಬದುಕು ಮೊದಲಾದ ಭಾವನೆಯನ್ನು ಹೊಂದಲು ಪ್ರಾರಂಭಿಸಿದಾಗಿನಿಂದ ಆತನಿಗೆ ಲೆಕ್ಕವಿಡುವ ಅವಶ್ಯಕತೆ ಉಂಟಾಯಿತು. ಓದು ಬರಹ ಬಾರದೆ

ಇದ್ದರೂ ತಾನು ಕೆಲಸಕ್ಕೆ ಹೋದ ದಿನಗಳನ್ನು ದಿನನಿತ್ಯ ಗೋಡೆಯ ಮೇಲೆ ಒಂದೊಂದು ಗೆರೆ ಎಳೆದು ಗುರುತಿಸಿ ಕೊನೆಯಲ್ಲಿ ಲೆಕ್ಕಹಾಕಿ ಸಂಬಳ ಪಡೆಯುತ್ತಾನೆ. ಇದನ್ನು ಲಿಪಿಯ ಉಗಮದ ಕಾಲ ಎನ್ನುವರು.

ಪ್ರಶ್ನೆಗಳು :

ಅ) ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಗಳಿಗಿರುವ ವ್ಯತ್ಯಾಸವೇನು?

ಬಿ) ಲಿಪಿಯ ಉಗಮ ಹೇಗಾಯಿತು?

**XII** ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. **1 x 4 = 4**

37. ಉತ್ತಮ ಹವ್ಯಾಸಗಳು

ಅಥವಾ

ಪ್ರವಾಹದಿಂದ ಆಗುವ ಅನಾಹುತಗಳು

**XIII** ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. **1 x 5 = 5**

38. ನಿಮ್ಮನ್ನು ಜಯನಗರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಕಿಶೋರ್' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ಶಿಕ್ಷಕರ ದಿನಾಚರಣೆಯ ವರದಿಯನ್ನು ಪ್ರಕಟಿಸುವಂತೆ ಕೋರಿ ವಿಜಯವಾಣಿ ದಿನಪತ್ರಿಕೆಯ ಸಂಪಾದಕರಿಗೆ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಬಸವನಗುಡಿಯ 'ಶಾಲಿನಿ' ಎಂದು ಭಾವಿಸಿಕೊಂಡು ನೀವು ಕೈಗೊಂಡ ಪ್ರವಾಸದ ಬಗ್ಗೆ ವರ್ಣಿಸಿ ಧಾರವಾಡದಲ್ಲಿರುವ ನಿಮ್ಮ ಅಜ್ಜಿ 'ಜಲಜಾಕ್ಷಿ' ಅವರಿಗೆ ಒಂದು ಪತ್ರ ಬರೆಯಿರಿ.

* * * *